## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಕಂ/ತಹ/ವಿವಾದ/49/2015-16 ದಿ:25-05-2016

ವಾದಿಗಳು

...ತ ಗಂಡ ಹೆಚ್.ಮೌನೇಶಚಾರಿ.
...ನೇ ವಾರ್ಡ್, ಸದಾಶಿವನಗರ.
...ಗುಪ್ಪ ನಗರ

ವಿರುದ್ಧ

ಪ್ರತಿವಾದಿಗಳು

1.ಹೆಚ್.ಚಂದ್ರಶೇಖರಾಚಾರ್ ತಂದೆ
ದಿ:ಅಂಬಣ್ಣಾಚಾರಿ. ಸಿರುಗುಪ್ಪ.
2.ಹೆಚ್.ಮೌನೇಶಚಾರಿ ತಂದೆ
ದಿ:ಅಂಬಣ್ಣಾಚಾರಿ.,18 ನೇ ವಾರ್ಡ್
ಸಿರುಗುಪ್ಪ, ನಗರ

...ದಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಅಕ್ಕ ತಂಗೇರಹಾಳು | 53/3ಸಿ | 5-80 | ಖುಷ್ಕಿ |

...ಠ:-

ಸಿರುಗುಪ್ಪ ತಾಲೂಕು ಅಕ್ಕತಂಗೇರಹಾಳು ಗ್ರಾಮದ ಸ,ನಂ. 53/3ಸಿ, ವಿ:5-80 ಎಕ್ರೆ ಜಮೀನು ಹಾಲಿ ...ಣಿ ಪ್ರಕಾರ ಹೆಚ್.ಮೌನೇಶಚಾರಿ ತಂದೆ ಲೇಟ್ ಅಂಬಣ್ಣಾಚಾರಿ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ...ಗೂ ಕುಟುಂಬದವರು ದಿ:18-08-2015 ರಂದು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ಹಕ್ಕು ...ರುವರಾದ ಚಂದ್ರಶೇಖರಾಚಾರ್ ತಂದೆ ಲೇಟ್ ಅಂಬಣ್ಣಾಚಾರಿ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ...ಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ...ಯ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ...ರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ...ಎ. ಎ.ಕೆ.ಹಾಳು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ...ಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಶ್ರೀಮತಿ ಕವಿತ ಗಂಡ ಮೌನೇಶಾಚಾರಿ ಇವರು "ಸದ್ರಿ ...ಮೀನು ತಮ್ಮ ಗಂಡನ ಹೆಸರಿನಲ್ಲಿದ್ದು, ಈ ಆಸ್ತಿಯೇ ನಮ್ಮ ಕುಟುಂಬಕ್ಕೆ ಆಧಾರವೆಂದು ಪ್ರಸ್ತುತ ಅರ್ಜಿದಾರರ ...ರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:02-11-2015 ರಂದು ತಕರಾರು ಅರ್ಜಿ ...ಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ...ಸಂಖ್ಯೆ-07/2015-16 ದಿ:06-11-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ...ಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ...ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:28-03-2016 ರಿಂದ 15-04-2016 ರ ...ಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

42

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ದಿ:01-04-2016 ರಂದು ವಿಚಾರಣೆ ಸಮಯದಲ್ಲಿ, ತಾವುಗಳು ಗ್ರಾಮದ ಹಿರಿಯರ ಸಮಕ್ಷಮದಲ್ಲಿ ರಾಜೀ ಸಂಧಾನದಿಂದ ಪ್ರಕರಣ ಇತ್ಯರ್ಥಗೊಳಿಸಿಕೊಂಡಿದ್ದೇವೆಂದು ತಿಳಿಸಿದ ಪ್ರಯುಕ್ತ, ಲಿಖಿತವಾಗಿ ಹೇಳಿಕೆ ನೀಡಲು ತಿಳಿಸಲಾಯಿತು. ದಿನಾಂಕ:15-04-2016 ರಂದು ಉಭಯತರೂ ಹಾಜರಾಗಿ ರೂ,20/ರ ಛಾಪಾ ಕಾಗದದ ಮೇಲೆ "ಸದ್ರಿ ಹಕ್ಕು ಬದಲಾವಣೆಗೆ ಸಲ್ಲಿಸಿದ ತಕರಾರನ್ನು ವಾಪಾಸು ಪಡೆಯುವುದಾಗಿ ಮತ್ತು ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆಗೆ ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು ನೋಟರಿ ಸಮಕ್ಷಮ ಪ್ರಮಾಣಿಕರಿಸಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ.

ಆದ್ದರಿಂದ ಸಿರುಗುಪ್ಪ ತಾಲೂಕು ಅಕ್ಕತಂಗೇರಹಾಳು ಗ್ರಾಮದ ಸ,ನಂ. 53/3ಸಿ, ವಿ:5-80 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಹೆಚ್.ಮೌನೇಶಚಾರಿ ತಂದೆ ಲೇಟ್ ಅಂಬಣ್ಣಾಚಾರಿ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ಹಾಗೂ ಕುಟುಂಬದವರು ದಿ:18-08-2015 ರಂದು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ಹಕ್ಕು ಪಡೆದವರಾದ ಚಂದ್ರಶೇಖರಾಚಾರ್ ತಂದೆ ಲೇಟ್ ಅಂಬಣ್ಣಾಚಾರಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ/ಹಬ/ವಿವಾದ/49/2015-16** **ದಿ:25-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಅಕ್ಕತಂಗೇರಹಾಳು ಗ್ರಾಮದ ಸ,ನಂ. 53/3ಸಿ, ವಿ:5-80 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಹೆಚ್.ಮೌನೇಶಚಾರಿ ತಂದೆ ಲೇಟ್ ಅಂಬಣ್ಣಾಚಾರಿ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ಹಾಗೂ ಕುಟುಂಬದವರು ದಿ:18-08-2015 ರಂದು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ಹಕ್ಕು ಪಡೆದವರಾದ **ಚಂದ್ರಶೇಖರಾಚಾರ್ ತಂದೆ ಲೇಟ್ ಅಂಬಣ್ಣಾಚಾರಿ** ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M-[signature]

**ತಹಶೀಲ್ದಾರರು,ಸಿರುಗುಪ್ಪ**

ಪ್ರತಿ: ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
ವಾದಿ-ಪ್ರತಿವಾದಿಗಳಿಗೆ
ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರವರ ನ್ಯಾಯಾಲಯ

[signature] 25-05-2016.